1. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭಿಸೋಣ. ಮಾನ್ಯ ಅಶೋಕ್ ಖೇಣಿಯವರು ನಿಮ್ಮ ಪ್ರಶ್ನೆಯನ್ನು ಕೇಳಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 93(1598)

ಸರ್ಕಾರಿ ಕಛೇರಿಗಳಲ್ಲಿ ಸಿಬ್ಬಂದಿಗಳ ಕೊರತೆ

93(1598); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳ ಸರ್ಕಾರಿ ಕಛೇರಿಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಿಬ್ಬಂದಿ ಕೊರತೆಯಿಂದ ಆಡಳಿತ ಯಂತ್ರ ಕುಸಿದಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಲಭ್ಯ ಸರ್ಕಾರಿ ಸಿಬ್ಬಂದಿಯೊಂದಿಗೆ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದ್ದು, ಆಡಳಿತದ ಯಂತ್ರ ಕುಸಿದಿರುವುದಿಲ್ಲ.

ಇ) ರಾಜ್ಯದಲ್ಲಿ ಖಾಲಿಯಿರುವ ಒಟ್ಟು 1,81,266/– ಹುದ್ದೆಗಳ ಪೈಕಿ, ಮೊದಲ ಹಂತದಲ್ಲಿ, ಸಕಾಲ ಸೇವೆಗಳನ್ನು ಒದಗಿಸುತ್ತಿರುವ 12 ಇಲಾಖೆಗಳ 3700 ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದ್ದು, ಈ ವಿಷಯವಾಗಿ ಸರ್ಕಾರವು ಶೀಘ್ರವಾಗಿ ಕ್ರಮ ಕೈಗೊಳ್ಳುತ್ತಿದೆ. ಇದೇ ರೀತಿ, ಇತರ ಇಲಾಖೆಗಳಲ್ಲಿ ಖಾಲಿ ಇರುವ

ಹುದ್ದೆಗಳನ್ನು ಸಹ ಹಂತಹಂತವಾಗಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಅಶೋಕ್ ಖೇಣಿ: ಉತ್ತರವನ್ನು ಒದಗಿಸಿದ್ದಾರೆ. ನಮ್ಮ ಪ್ರಶ್ನೆಯಲ್ಲಿ ನಾವು ಕೇಳಿದ್ದು there is a tremendous shortage of government staff right from PDO and village Accountant onwards. ಅದರಿಂದ ನಮ್ಮ ಸ್ಕೀಮ್ಸ್ implement ಆಗುತ್ತಿಲ್ಲ. ಉದಾಹರಣೆಗೆ ನಮ್ಮ 34 ಗ್ರಾಮ ಪಂಚಾಯಿತಿಯಲ್ಲಿ 16 PDOs are not there i.e., nearly 50% staff is not there in my constituency. ನನ್ನ ಪ್ರಶ್ನೆ ಏನೆಂದರೆ, ಯಾವಾಗ ಇವರನ್ನು ಹಾಕುತ್ತಾರೆ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರ ಅವರಿಗೆ ತಲುಪಿದೆ. ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರೆಂಬ ಪ್ರಶ್ನೆಯನ್ನು ಕೇಳುತ್ತಿದ್ದೀರಾ? ಒಟ್ಟು 7,45,000 ಹುದ್ದೆಗಳು ಮಂಜೂರಾಗಿದೆ. ಅದರಲ್ಲಿ 1,81,000 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳು ನಿನ್ನೆ ಮೊನ್ನೆಯಿಂದ ಖಾಲಿ ಆಗಿರುವುದಿಲ್ಲ. ಸುಮಾರು ವರ್ಷಗಳಿಂದಲೂ ಖಾಲಿ ಇರುವ ಹುದ್ದೆಗಳಾಗಿವೆ. ನಾವು ಅಧಿಕಾರಕ್ಕೆ ಬಂದ ಮೇಲೆ ಹಂತ ಹಂತವಾಗಿ ಭರ್ತಿ ಮಾಡಬೇಕೆಂದು ತೀಮಾನ ಮಾಡಿ, ಈಗಾಗಲೇ ಕೆಲವು ಇಲಾಖೆಗಳಿಗೆ ಒಪ್ಪಿಗೆ ಕೊಟ್ಟಿದ್ದೇವೆ. Home Department ನಲ್ಲಿ 8,501 ಹುದ್ದೆಗಳು, Education ನಲ್ಲಿ 7,794 ಹುದ್ದೆಗಳು, Urban Development ನಲ್ಲಿ 998 ಹುದ್ದೆಗಳು, ಕಾನೂನು ಇಲಾಖೆಯಲ್ಲಿ 371 ಹುದ್ದೆಗಳು, Transport ನಲ್ಲಿ 242 ಹುದ್ದೆಗಳು, Health and Family Welfare ನಲ್ಲಿ 107 ಹುದ್ದೆಗಳು. Economy Measuresಅನ್ನು relax ಮಾಡಿ recruitment ಮಾಡಲು ಅವಕಾಶ ಕೊಟ್ಟಿದ್ದೇವೆ. ಈ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುತ್ತೇವೆ. ಅವರ ಕ್ಷೇತ್ರದಲ್ಲೂ ಸಹ Police, Health, Education, Urban Development, Animal Husbandry ಹೀಗೆ ಎಲ್ಲ Department ನಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ

ಅನುಮತಿ ಕೊಟ್ಟಿದ್ದೇವೆ. ನಿಮ್ಮ ಕ್ಷೇತ್ರದಲ್ಲೂ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಅಶೋಕ್ ಖೇಣಿ: ಅಧ್ಯಕ್ಷರೆ, Vacancies are there since last May. ಸರ್ಕಾರ ಅಧಿಕಾರಕ್ಕೆ ಬಂದು 9 ತಿಂಗಳಾಯಿತು. 9 ತಿಂಗಳಿನಲ್ಲಿ ಒಂದೂ ಹುದ್ದೆಯನ್ನು ಭರ್ತಿ ಮಾಡಿಲ್ಲ. ಅವರು ಚುನಾವಣೆಯಿದೆ, ಬಜೆಟ್ ಸೆಷನ್ ಇದೆಯೆಂದು ನಂತರ ಭರ್ತಿ ಮಾಡುವುದಾಗಿ ಹೇಳುತ್ತಾರೆ. ನಮ್ಮಲ್ಲಿ 34 ಗ್ರಾಮ ಪಂಚಾಯಿತಿಯಲ್ಲಿ 16 PDO posts vacant ಇದೆ. ಅಲ್ಲಿ ಏನೂ ಕೆಲಸ ಆಗುತ್ತಿಲ್ಲ. Existing staff ಗೆ ಹೊಸ ಹೊಸ ಸ್ಕೀಮ್ declare ಮಾಡುತ್ತಿದ್ದಾರೆ. They keep declaring schemes after schemes. My question is when will they fill these posts? I want a deadline. ಏಕೆಂದರೇನೂ ಕೆಲಸವಾಗುತ್ತಿಲ್ಲ. Zero ಕೆಲಸವಾಗುತ್ತಿದೆ.

ಅಧ್ಯಕ್ಷರು:ಗ್ರಾಮ ಪಂಚಾಯಿತಿಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸಿದ್ದರಾಮಯ್ಯ: ಹುದ್ದೆಗಳಲ್ಲಿ ಇರುವವರಿಂದಲೇ ಕೆಲಸ ಮಾಡಿಸುತ್ತಿದ್ದೇವೆ. ಕೆಲಸಗಳಿಗೆ ಏನೂ ತೊಂದರೆ ಆಗಿಲ್ಲ. ಆದರೆ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಹಂತ ಹಂತವಾಗಿ ಭರ್ತಿ ಮಾಡುತ್ತೇವೆ. ಈ ದಿನದಲ್ಲೇ ನಿಖರವಾಗಿ ಭರ್ತಿ ಮಾಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಅನೇಕ ಇಲಾಖೆಗಳಿಗೆ ಭರ್ತಿ ಮಾಡಲಿಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಭರ್ತಿ ಮಾಡಲಿಕ್ಕೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಅನೇಕ ಇಲಾಖೆಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಆ ಎಲ್ಲ ಇಲಾಖೆಗಳಿಗೂ ಅನುಮತಿ ಕೊಟ್ಟಿದ್ದೇವೆ. ಇವರ ಕ್ಷೇತ್ರಕ್ಕೂ ಸಂಬಂಧಪಟ್ಟಂತೆ ಭರ್ತಿ ಮಾಡುತ್ತೇವೆ.

ಶ್ರೀ ಅಶೋಕ ಖೇಣಿ: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಯನ್ನು ಕೇಳಲು ನನಗೆ ಅವಕಾಶ ಕೊಡಿ. ನಾನು ಮನವಿ ಮಾಡುವುದೇನೆಂದರೆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಎನ್ನುವ ಬಗ್ಗೆ ನನಗೆ deadline ಕೊಡಿ,

ಕಳೆದ 9 ತಿಂಗಳುಗಳಿಂದ ನಮ್ಮ ಕ್ಷೇತ್ರದಲ್ಲಿ ಯಾವುದೇ ಕೆಲಸಗಳು ಆಗಿಲ್ಲ. Please provide me security ಎಂದು ನಾನು ಇಂದು ಗೃಹ ಸಚಿವರಲ್ಲಿ ಕೇಳಿಕೊಂಡಿದ್ದೇನೆ. ಏಕೆಂದರೆ, ಜನ ನನ್ನನ್ನು They are ready to arrest me. Because ಏನೂ ಕೆಲಸ ಆಗುತ್ತಿಲ್ಲ. ಆದ್ದರಿಂದ ನನ್ನ ಮನವಿ ಇದೆ. ಯಾವಾಗ recruit ಮಾಡುತ್ತಾರೆನ್ನುವ ಬಗ್ಗೆ ನನಗೆ ಉತ್ತರ ಕೊಡಲಿ. ಮಾನ್ಯ ಮುಖ್ಯಮಂತ್ರಿಗಳವರೇ ಹೇಳಲಿ, ಈ ವಿಚಾರದಲ್ಲಿ ನಮಗೆ deadline ಕೊಡಲಿ. By What time?

ಅಧ್ಯಕ್ಷರು: Comprehensive ಆಗಿ ಉತ್ತರ ಹೇಳಿದ್ದಾರೆ. ಯಾರಾದರೂ deadline ಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ಅಶೋಕ್ ಖೇಣಿ: Code of Conduct ಬಂದಿದೆ, ಎಲೆಕ್ಷನ್ ಬಂದಿದೆ ಎಂದು ನಂತರ ಹೇಳುತ್ತಾರೆ.

ಅಧ್ಯಕ್ಷರು: ಸರ್ಕಾರ ಎಂದರೆ ಅದೇ ರೀತಿಯಾಗಿಯೇ ಉತ್ತರ ಕೊಡುವುದು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸರ್ಕಾರ ಎಂದರೆ ಅದು corporate body ಅಲ್ಲ. ಹಂತ ಹಂತವಾಗಿ ಮಾಡುತ್ತೇವೆ. ನಿಮ್ಮ ಕ್ಷೇತ್ರದಲ್ಲಿಯೂ ಸಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ಅಧ್ಯಕ್ಷರು: ವಿನಯ್ ಕುಲಕರ್ಣಿ, ಸದರಿಯವರು ಸದನದಲ್ಲಿ ಹಾಜರಿರುವುದಿಲ್ಲ. ರಾಜೇಶ್.ಹೆಚ್.ಪಿ.ಯವರೆ ನಿಮ್ಮ ಪ್ರಶ್ನೆ ಸಂಖ್ಯೆ.1904 ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ ನಾಳೆ ಚರ್ಚೆಗೆ ತರಲು ಅವಕಾಶ ಕೊಡುತ್ತೇನೆ.

ಶ್ರೀ ರಾಜೇಶ್. ಹೆಚ್. ಪಿ.: ಮಾನ್ಯ ಅಧ್ಯಕ್ಷರೆ, ಆಯಿತು.

ಅಧ್ಯಕ್ಷರು: ತಿಪ್ಪೇಸ್ವಾಮಿ ಎಸ್.